**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ**

**ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆ 513/2022** **CW-1** **PW-1**

**ಸಾಕ್ಷಿಯನ್ನು ದಿಃ 03.11.2022 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ಭಾಗ್ಯ |
| ಗಂಡನ ಹೆಸರುಃ | ಕುಮಾರಾಚಾರಿ |
| ವಯಸ್ಸುಃ | 33 |
| ವೃತ್ತಿಃ | ಗೃಹಿಣಿ |
| ವಾಸ ಸ್ಥಳಃ | ಮಾರನೇಹಳ್ಳಿ ಗ್ರಾಮ |

**ಮುಖ್ಯವಿಚಾರಣೆಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನನಗೆ ಚಾಸ-2 ರಿಂದ 4 ಗೊತ್ತು. ನನ್ನ ಅತ್ತೆಯ ಹೆಸರು ಜಯಮ್ಮ. ನಾನು ಮಾರನೇಹಳ್ಳಿಯ ಜನತಾ ಕಾಲೋನಿಯಲ್ಲಿ ವಾಸವಿದ್ದೇನೆ. ನಮಗೆ ಸೇರಿದ ಜಮೀನು ಅಲ್ಲಿ ಇರುತ್ತದೆ. ಅದು ನನ್ನ ಅತ್ತೆಯ ಹೆಸರಿನಲ್ಲಿರುತ್ತದೆ. ಸದರಿ ಜಮೀನು ನನ್ನ ಅತ್ತೆಗೆ ಹೇಗೆ ಬಂದಿರುತ್ತದೆ ಎಂದು ನನಗೆ ಹೇಳಲಾಗುವುದಿಲ್ಲ. ಆರೋಪಿತರು ಗೊತ್ತು. ಆರೋಪಿಗಳಿಗೆ ನಮ್ಮ ಜಮೀನಿನ ಪಕ್ಕ ಯಾವುದೇ ಜಮೀನು ಇರುವುದಿಲ್ಲ. ನಮ್ಮ ಜಮೀನಿನ ಬಲ ಭಾಗಕ್ಕೆ ಮೆಡಿಕಲ್ ಶಾಪ್, ಎಡಭಾಗಕ್ಕೆ ತೋಟ, ಮುಂಭಾಗ ಖಾಲಿ ನಿವೇಶನ, ಹಿಂಭಾಗಕ್ಕೆ ನಮ್ಮದೇ ಮನೆ ಇದೆ.

ದಿಃ 24-03-2022 ರಂದು ಬೆಳಿಗ್ಗೆ 9.30 ಗಂಟೆ ಸಮಯದಲ್ಲಿ ಆರೋಪಿಗಳು ನಮ್ಮ ಮನೆ ಮುಂದೆ ಇರುವ ಖಾಲಿ ನಿವೇಶನದಲ್ಲಿ ಗಿಡಗಳನ್ನು ಕಿತ್ತು, ಸ್ವಚ್ಛ ಮಾಡಲು ಬಂದಿದ್ದರು, ಅದನ್ನು ನಾನು ಪ್ರಶ್ನೆ ಮಾಡಿದಾಗ ಆರೋಪಿಗಳು ಅದು ನಮಗೆ ಸೇರಬೇಕು ಎಂದು ನನ್ನ ಜೊತೆ ಜಗಳ ತೆಗೆದು, 1 ನೇ ಆರೋಪಿ ಕೆಟ್ಟ ಮಾತುಗಳಿಂದ ಬೈದು,

ದೊಣ್ಣೆಯಿಂದ ನನಗೆ ಹೊಡೆಯಲು ಬಂದಾಗ ನಾನು ತಪ್ಪಿಸಿಕೊಂಡೆನು, ನಂತರ ಅಲ್ಲಿಯೇ ಮರಗೆಲಸ ಮಾಡುತ್ತಿದ್ದ ಚಾಸ-2,3 ರವರು ಜಗಳ ಬಿಡಿಸಿರುತ್ತಾರೆ. 1 ನೇ ಆರೋಪಿ ನಿನ್ನನ್ನು ಬಿಡುವುದಿಲ್ಲ, ಮಾನಭಂಗ ಮಾಡುತ್ತೇನೆ, ನಿಮ್ಮ ಮನೆಗೆ ಬೆಂಕಿ ಹಾಕಿ ಸುಡುತ್ತೇನೆ ಎಂದು ಬೆದರಿಕೆ ಹಾಕಿರುತ್ತಾನೆ. ನಂತರ ನನ್ನ ತಂದೆಗೆ ಆರೋಗ್ಯ ಸರಿಯಿಲ್ಲದ ಕಾರಣ ನಾನು ಅರ್ಜುನಳ್ಳಿಗೆ ಹೋಗಿರುತ್ತೇನೆ. 5-6 ದಿನಗಳ ನಂತರ ಬಂದು ಆರೋಪಿಗಳ ವಿರುದ್ಧ ದೂರು ನೀಡಿರುತ್ತೇನೆ.

ಈಗ ಸಾಕ್ಷಿಗೆ ದೂರನ್ನು ಅನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು, ಸದರಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಾನು ಈಗ ಮೇಲೆ ಹೇಳಿದ ವಿಚಾರಗಳನ್ನು ನಿಪಿ-1 ರಲ್ಲಿ ತಿಳಿಸಿರುತ್ತೇನೆ.

**(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

1987 ರಲ್ಲಿ ನನ್ನ ಅತ್ತೆಯ ಹೆಸರಿಗೆ ಸದರಿ ಖಾಲಿ ನಿವೇಶನ ಮಂಜೂರಾಗಿರುತ್ತದೆ ಎಂದರೆ ಸರಿ. ಸದರಿ ನಮ್ಮ ಮನೆಯ ಪೂರ್ವ ದಿಕ್ಕಿಗೆ ಮೈಸೂರು ರಸ್ತೆ ಬರುತ್ತದೆ ಎಂದರೆ ಸರಿ. ಸದರಿ ರಸ್ತೆಯ ಪಕ್ಕದಲ್ಲಿರುವ ಜಾಗದಲ್ಲಿ ಆರೋಪಿಗಳು ಅಕ್ರಮವಾಗಿ ಗುಡಿಸಲು ನಿರ್ಮಿಸಿದ್ದು ಆ ಸಂಬಂಧ ನನ್ನ ಅತ್ತೆ ಆರೋಪಿಗಳ ವಿರುದ್ಧ ಅ.ದಾ. 97/2004 ರಂತೆ ಸಿವಿಲ್ ದಾವೆ ಹೂಡಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ಆರೋಪಿಗಳ ವಿರುದ್ಧ ಶಾಶ್ವತ ನಿರ್ಬಂಧಕಾಜ್ಞೆ ಆದೇಶ ಮಾಡಿ, ಗುಡಿಸಲನ್ನು ತೆರವುಗೊಳಿಸುವ ಆದೇಶವನ್ನು ಮಾಡಲಾಗಿತ್ತು ಎಂದರೆ ಸರಿ. ಸದರಿ ಆದೇಶವನ್ನು ಉಲ್ಲಂಘಿಸಿ ಆರೋಪಿಗಳು ಮರಗಿಡಗಳನ್ನು ತೆಗೆಯುತ್ತಿದ್ದುದನ್ನು ನಾನು

ಪ್ರಶ್ನೆ ಮಾಡಿದ ಕಾರಣ ಆರೋಪಿಗಳು ನನ್ನ ಜೊತೆ ಜಗಳ ಮಾಡಿದ್ದಾರೆ ಎಂದರೆ ಸರಿ. ನನ್ನ ಗಂಡನೂ ಸಹ ಆರೋಪಿಗಳ ವಿರುದ್ದ ಒಂದು ಸಿವಿಲ್ ದಾವೆ ಹೂಡಿದ್ದಾರೆ ಎಂದರೆ ಸರಿ. ಆರೋಪಿಗಳು ಸದರಿ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಂ.ಪಿ.ಎಂ ವಕೀಲರಿಂದಃ**

ನನ್ನ ಗಂಡ ಹೂಡಿದ್ದಾರೆ ಎನ್ನಲಾದ ಸಿವಿಲ್ ದಾವೆಯ ಸಂಖ್ಯೆ ನನಗೆ ಗೊತ್ತಿಲ್ಲ. ನನ್ನ ಅತ್ತೆ ಹೂಡಿದ್ದ ಅ.ದಾ. 97/2004 ರಲ್ಲಿ ಯಾರು ಪಕ್ಷಗಾರರಾಗಿದ್ದರು ಎಂದು ನನಗೆ ಗೊತ್ತಿಲ್ಲ. 1 ನೇ ಆರೋಪಿ ಚಿಕ್ಕಮ್ಮ ವಸಂತಮ್ಮರವರಿಗೂ ಸಹ ನಮ್ಮ ನಿವೇಶನದ ಪಕ್ಕದಲ್ಲಿಯೇ ಒಂದು ನಿವೇಶನ ಮಂಜೂರಾಗಿತ್ತು ಎಂದರೆ ಸರಿಯಲ್ಲ. ನನಗೆ ವಸಂತಮ್ಮ ಯಾರೆಂದು ಗೊತ್ತು. ಅವರು ಈಗ ಮರಣ ಹೊಂದಿರುತ್ತಾರೆ. ಸದರಿ ವಸಂತಮ್ಮರವರಿಗೂ ಅವರ ಜೀವಿತಕಾಲದಲ್ಲಿ ನಿವೇಶನ ಮಂಜೂರಾಗಿತ್ತು ಎಂದರೆ ಸರಿಯಲ್ಲ. ಸದರಿ ನಿವೇಶನವನ್ನು 1 ನೇ ಆರೋಪಿಗೆ ವಿಲ್ ಮಾಡಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸೈಟ್ ವಿಲ್ ಮೂಲಕ ನನಗೆ ಸೇರಬೇಕು ಎಂದು ಹಾಸನದ ಜಿಲ್ಲಾ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿ. ನಾನು ಈ ಪ್ರಕರಣವನ್ನು ಹೊರತುಪಡಿಸಿ ಆರೋಪಿಯ ವಿರುದ್ದ ಮತ್ತೊಂದು ಕ್ರಿಮಿನಲ್ ಪ್ರಕರಣ ದಾಖಲು ಮಾಡಿರುತ್ತೇನೆ. ಅದರ ಸಂಖ್ಯೆ ನನಗೆ ಗೊತ್ತಿಲ್ಲ.

ನಮ್ಮ ಮತ್ತು ಆರೋಪಿಗಳ ನಡುವೆ ನಿವೇಶನಕ್ಕೆ ಸಂಬಂಧಿಸಿದಂತೆ ಆಗಾಗ ಜಗಳವಾಗುತ್ತಿತ್ತು ಎಂದರೆ ಸರಿ. ಆ ಸಂಬಂಧ ಅವರ ಮೇಲೆ ನನಗೆ ದ್ವೇಷ ಇದ್ದು, ಆ ಕಾರಣ ನಾನು ಅವರ ವಿರುದ್ದ ಸುಳ್ಳು ದೂರುಗಳನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1 ನ್ನು ಯಾರೋ ಒಬ್ಬರ ಹತ್ತಿರ ಠಾಣೆಯಲ್ಲಿ ಬರೆಸಿರುತ್ತೇನೆ, ಅವರ ಹೆಸರು ಗೊತ್ತಿಲ್ಲ. ನಿಪಿ-1 ನ್ನು ನೀಡಲು ನಾನೊಬ್ಬಳೇ ಹೋಗಿದ್ದೆ. ನಿಪಿ-1 ರಲ್ಲಿರುವ ವಿಚಾರಗಳು ನನಗೆ ಗೊತ್ತಿಲ್ಲ

ಎಂದರೆ ಸಾಕ್ಷಿಯು ಮುಂದುವರೆದು ನನಗೆ ಓದಲು ಬರೆಯಲು ಬರುವುದಿಲ್ಲ ಎಂದು ನುಡಿಯುತ್ತಾರೆ.

ಚಾಸ-2 ನನ್ನ ತಮ್ಮ. ಆರೋಪಿಗಳು ನಮ್ಮ ಜಮೀನಿಗೆ ಅಕ್ರಮ ಪ್ರವೇಶ ಮಾಡಿ , ನನಗೆ ಅವಾಚ್ಯ ಶಬ್ದಗಳಿಂದ ಬೈದು, ಕೊಲೆ ಬೆದರಿಕೆ ಹಾಕಿರುವುದು ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ. ಆರೋಪಿಗಳ ಮೇಲಿರುವ ದ್ವೇಷದ ಕಾರಣ ನಾನು ಸುಳ್ಳು ದೂರು ದಾಖಲು ಮಾಡಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲಾ</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ದೀಪು.ಬಿ.ಸಿ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.**